# ಗರ್ಭಾವಸ್ಥೆ: ಅಂಗವಾಡಿ ಕೇಂದ್ರದಲ್ಲಿ ಆರಂಭದಲ್ಲೇ ನೋಂದಣಿಮಾಡುವುದು

## ನೋಂದಣಿ

- ಯಾರೇ ಮಹಿಳೆ ಗರ್ಭಧಾರಣೆ ಮಾಡಿದ ಮೊದಲನೇ ಮೂರು ತಿಂಗಳುಗಳಿಗೆ ಒಳಗಾಗಿ ಎ.ಎನ್.ಎಂ ಮತ್ತು ಅಂಗನವಾಡಿ ಕಾರ್ಯಕರ್ತೆಯ ಬಳಿ ತನ್ನ ಹೆಸರನ್ನು ನೋಂದಣಿಮಾಡಬೇಕು.
- ಹಾಗಿದ್ದರೂ, ಒಂದು ವೇಳೆ ಯಾರೇ ಮಹಿಳೆ ತನ್ನ ಗರ್ಭಾವಸ್ಥೆ ವೇಳೆಯಲ್ಲಿ ತಡವಾಗಿ ಬಂದು ಹೆಸರನ್ನು ನೋಂದಾಯಿಸಿದರೂ ಕೂಡಾ ಆಕೆಯನ್ನು ತಿರಸ್ಕರಿಸಬಾರದು ಮತ್ತು ಆಕೆಯ ಗರ್ಭಾವಸ್ಥೆಗೆ (ಗರ್ಭಧಾರಣೆ ಪೂರ್ತಿಗೊಂಡಿರುವ ಸಮಯಕ್ಕೆ) ಅನುಗುಣವಾಗಿ, ಆಕೆಗೆ ಸೂಕ್ತವಾದ ಆರೈಕೆಯನ್ನು ನೀಡಬೇಕು.
- ತಾಯಿ ಮತ್ತು ಮಗುವಿನ ರಕ್ಷಣೆ ಕಾರ್ಡ್‌ನಲ್ಲಿರುವ ಎಲ್ಲಾ ಶೀರ್ಷಿಕೆಗಳ ಮಹತ್ವಗಳನ್ನು ಸಹಾಯಕ ನರ್ಸ್/ಅಂಗನವಾಡಿ ಕಾರ್ಯಕರ್ತೆ ತಾಯಿಗೆ ಅಗತ್ಯವಾಗಿ ವಿವರಿಸಬೇಕು. ಒಂದು ವೇಳೆ ಯಾವುದೇ ವಿಚಾರ ಸ್ಪಷ್ಟವಾಗಿಲ್ಲವಾದಲ್ಲಿ, ಪ್ರಶ್ನೆಗಳನ್ನು ಕೇಳುವಂತೆ ಅಂತಹ ಮಹಿಳೆಗೆ ಮತ್ತು/ಅಥವಾ ಕುಟುಂಬ ಸದಸ್ಯರಿಗೆ ಪ್ರೇರೇಪಿಸಬೇಕು ಮತ್ತು ಅವುಗಳಿಗೆ ಉತ್ತರವನ್ನು ನೀಡಬೇಕು.



### ಅಂಗನವಾಡಿ ಕೇಂದ್ರದಲ್ಲಿ ಆರಂಭದಲ್ಲಿ ನೋಂದಣಿ ಮಾಡುವುದರಿಂದ ಆಗುವ ಪ್ರಯೋಜನಗಳು

- ನಿರಂತರ ಆರೋಗ್ಯ ತಪಾಸಣೆ ಮಾಡಿಕೊಳ್ಳಬಹುದು.
- ಪ್ರತಿ ಭೇಟಿಯಲ್ಲೂ ರಕ್ತ ಮತ್ತು ಮೂತ್ರ ಪರೀಕ್ಷೆ ಮಾಡಿಸಿಕೊಳ್ಳಬಹುದು.
- ಇಂದಿರಾ ಗಾಂಧಿ ಮಾತೃತ್ವ ಸಹಯೋಗ ಯೋಜನೆ ಮತ್ತು ಜನನಿ ಸುರಕ್ಷೆ ಯೋಜನೆ ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯುವ ಅಧಿಕಾರ ಹೊಂದಿರುತ್ತಾರೆ.
- ಅಂಗನವಾಡಿ ಕೇಂದ್ರದಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು.
- ಒಂದು ವೇಳೆ ಅಗತ್ಯವಿದ್ದಲ್ಲಿ ಅಥವಾ ತುರ್ತು ಪರಿಸ್ಥಿತಿಗಳಲ್ಲಿ, ಸಕಾಲದಲ್ಲಿ ಗರ್ಭಪಾತ ಸೇವೆಗಳನ್ನು ಉಪಯೋಗಿಸಿ–ಕೊಳ್ಳಬಹುದಾಗಿದೆ.

## ಮಾಡಬೇಕಾದ ಕೆಲಸಗಳು



- ❖ ಹೊಸತಾಗಿ ಮದುವೆಯಾಗಿರುವ ದಂಪತಿಗಳು, ಗರ್ಭಿಣಿಯರು ಮೊದಲಾದವರ ಮನೆಗಳಿಗೆ ಭೇಟಿಗಳನ್ನು ಮಾಡಬೇಕು, ಅಂಗನವಾಡಿ ಕೇಂದ್ರದಲ್ಲಿ ಆರಂಭದಲ್ಲೇ ಹೆಸರನ್ನು ನೋಂದಾಯಿಸುವುದರಿಂದಾಗಿ ಉಂಟಾಗುವ ಎಲ್ಲಾ ಪ್ರಯೋಜನಗಳನ್ನು ಅವರಿಗೆ ವಿವರಿಸಬೇಕು.
- ❖ ನಿಮ್ಮ ಪ್ರದೇಶದಲ್ಲಿರುವ ಎಲ್ಲಾ ಗರ್ಭಿಣಿಯರನ್ನು ಗುರುತಿಸಬೇಕು.
- ❖ ಸ್ವ–ಸಹಾಯ ಗುಂಪುಗಳು, ತಾಯಂದಿರ ಸಮಿತಿ, ಸಮಗ್ರ ಶಿಶು ಅಭಿವೃದ್ಧಿ ಸೇವೆಗಳ ಫಲಾನುಭವಿಗಳು ಮೊದಲಾದವರ ಮೂಲಕ ಗ್ರಾಮೀಣ ಆರೋಗ್ಯ ಮತ್ತು ಗ್ರಾಮೀಣ ಆರೋಗ್ಯ ಮತ್ತು ಪೌಷ್ಠಿಕಾಂಶ ದಿನಾಚರಣೆ ಫಲಾನುಭವಿಗಳನ್ನು ಒಂದುಗೂಡಿಸಬೇಕು (ಅಂಗನವಾಡಿ ಸಹಾಯಕಿ/ಮಾನ್ಯತೆ ಪಡೆದಿರುವ ಸಾಮಾಜಿಕ ಆರೋಗ್ಯ ಕಾರ್ಯಕರ್ತೆ ಜೊತೆಗೆ).
- ❖ ಅಂಗನವಾಡಿ ಕೇಂದ್ರದಲ್ಲಿ ಆರಂಭದಲ್ಲೇ ನೋಂದಣಿ ಮಾಡುವುದರಿಂದ ಆಗುವ ಪ್ರಯೋಜನಗಳನ್ನು ಗರ್ಭಿಣಿಯರು ಮತ್ತು ಅವರ ಕುಟುಂಬದವರಿಗೆ ವಿವರಿಸಿ ಸಲಹೆಗಳನ್ನು ನೀಡಬೇಕು.
- ❖ ನೋಂದಣಿಮಾಡಿಕೊಂಡಿರುವ ಗರ್ಭಿಣಿಯರ ವಿವರಗಳು ಮತ್ತು ಅವರಿಗೆ ಸಿಗುವ ಸೌಲಭ್ಯಗಳ ದಾಖಲಾತಿಗಳನ್ನು ತಯಾರಿಸಬೇಕು.

### ಎ.ಎನ್.ಎಂ/ಅಂಗನವಾಡಿ ಕಾರ್ಯಕರ್ತೆ ಇವುಗಳನ್ನು ಖಚಿತಪಡಿಸಬೇಕು

- ❖ ಅಂಗನವಾಡಿ ಕೇಂದ್ರದಲ್ಲಿ ಹೆಸರನ್ನು ನೋಂದಾಯಿಸಿರುವ ಎಲ್ಲಾ ಗರ್ಭಿಣಿಯರು ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಮತ್ತು ಪ್ರಸವ–ಪೂರ್ವದ 3 ತಪಾಸಣೆಗಳನ್ನು ಮಾಡಿಸಿಕೊಂಡಿರಬೇಕು.
- ❖ ತಾಯಿ ಮತ್ತು ಮಗುವಿನ ಸುರಕ್ಷೆ ಕಾರ್ಡ್‌ನಲ್ಲಿರುವ ಗರ್ಭಧಾರಣೆ ತಿಂಗಳು ಕಾಲಮ್ ಅಡಿಯಲ್ಲಿ ನೋಂದಾಯಿಸಿರುವ ದಿನಾಂಕವನ್ನು ಬರೆಯಬೇಕು.
- ❖ ಆಕೆ ಸಂಬಂಧಪಟ್ಟ ಅಂಗನವಾಡಿ ಕೇಂದ್ರ, ಆರೋಗ್ಯ ಉಪ ಕೇಂದ್ರ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರ ರಿಜಿಸ್ಟರ್‌ನಲ್ಲಿ ಗರ್ಭಿಣಿ ಎಂದು ಹೆಸರನ್ನು ನೋಂದಾಯಿಸಿದ್ದಾರೆಯೇ ಎಂಬುದನ್ನು ಖಚಿತಪಡಿಸಬೇಕು.
- ❖ ಗರ್ಭಿಣಿಯು ಪ್ರಸವ ಪೂರ್ವ ತಪಾಸಣೆಗಾಗಿ ಸಮಯಕ್ಕೆ ಸರಿಯಾಗಿ ಬರುತ್ತಿದ್ದಾರೆಯೇ ಎಂಬುದನ್ನು ಖಚಿತಪಡಿಸಬೇಕು.
- ❖ ತಾಯಿ ಮತ್ತು ಮಗುವಿನ ಸುರಕ್ಷೆ ಕಾರ್ಡನ್ನು ಜೊತೆಯಲ್ಲಿ ಕೊಂಡೊಯ್ಯಬೇಕು ಮತ್ತು ಪ್ರತಿ ಭೇಟಿಯಲ್ಲೂ ತೋರಿಸಬೇಕು.